**ಓ ಎಸ್ ನಂ:4/2016**
**ಪಿ.ಡಬ್ಲ್ಯೂ -1**
**ದಿನಾಂಕ: 13.09.2023**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ.ಎಲ್.ಬಿ. ವಕೀಲರಿಂದ:**

ದಿ:27.03.2001 ರಲ್ಲಿ ಪ್ರತಿವಾದಿಯರು ಮಾಡಿಕೊಟ್ಟ ಕರಾರು ಸಂದರ್ಬದಲ್ಲಿ ದಾವಾ ಸ್ವತ್ತು ಜಂಟಿಯಾಗಿತ್ತು ಎಂದರೆ ಸರಿ. ವೆಂಕಟೇಶ್, ಪುಂಡಲಿಕರಾವ್, ಎಸ್.ಆರ್.ದೇವೀರಪ್ಪ, ಜಿ.ಸಿ. ಕೃಷ್ಣಪ್ಪ ಮತ್ತು ವೆಂಕಟಾಚಲ ರವರ ಹೆಸರುಗಳಲ್ಲಿ ಜಂಟಿ ಖಾತೆ ಇತ್ತು ಎಂದರೆ ಸರಿ. ಸದರಿ ಜಂಟಿ ಖಾತೆಯಲ್ಲಿ 38

ಗುಂಟೆ ಜಂಟಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನಗೆ 4 ಗುಂಟೆ ಜಮೀನಿಗೆ ಕರಾರು ಮಾಡಿಕೊಡಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ.1 ನ್ನು ತೋರಿಸಲಾಗಿ ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

2. ಪ್ರತಿವಾದಿ ವೆಂಕಟಾಚಲ ರವರಿಗೆ ಜಂಟಿ ಖಾತೆಯಲ್ಲಿ ಅವರ ಹಿಸ್ಸೆ ಭಾಗಕ್ಕೆ ದಾವಾ ಅನುಸೂಚಿ ಸ್ವತ್ತು ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಿ:27.03.2001 ರಂದು ಕರಾರು ಪತ್ರ ಮಾಡಿಕೊಂಡ ಸಂದರ್ಬದಲ್ಲಿ ದಾವಾ ಸ್ವತ್ತು ಜಂಟಿ ಸ್ವಾಧೀನದಲ್ಲಿತ್ತು ಎಂದರೆ ಸರಿ. ದಿ:27.03.2001 ರ ಕರಾರು ಪತ್ರದಲ್ಲಿ ವೆಂಕಟೇಶ ಪುಂಡಲೀಕ, ದೇವಿರಪ್ಪ ಮತ್ತು ಕೃಷ್ಣಪ್ಪ ರವರ ಸಹಿಗಳು ಇರುವುದಿಲ್ಲ ಎಂದರೆ  ಸರಿ, ಸಾಕ್ಷಿಯು ಮುಂದುವರೆದು ಪ್ರತಿವಾದಿಯು ಅವರನ್ನು ಕರೆದುಕೊಂಡು ಬಂದಿರಲಿಲ್ಲ ಎಂದು ನುಡಿದಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ತೋರಿಸಿದ ಚೆಕ್ಕುಬಂದಿ ತಪ್ಪಾಗಿದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ್ನು ನನಗೆ ಕರಾರು ಮಾಡಿಕೊಡಲು ಮತ್ತು ಮಾರಾಟ ಮಾಡಲು ಪ್ರತಿವಾದಿಯು ಸಂಪೂರ್ಣ ಮಾಲೀಕರಲ್ಲ ಎಂದರೆ ಸರಿಯಲ್ಲ.

3. ನಿಪಿ-1 ರಂತೆ ನಾನು ರೂ.85,000/- ಗಳನ್ನು ಮುಂಗಡ ಹಣವಾಗಿ ಪ್ರತಿವಾದಿಗೆ ಕೊಟ್ಟು ಕರಾರು ಮಾಡಿಕೊಂಡಿರುವುದಿಲ್ಲ ಎಂದರೆ  ಸರಿಯಲ್ಲ. ದಿ:04.01.2012 ರಲ್ಲಿ ಪ್ರತಿವಾದಿಯು ನನ್ನಿಂದ ಪಡೆದ ಸಾಲದ ಹಣವನ್ನು ಚೆಕ್ ಮೂಲಕ ಹಿಂತಿರುಗಿಸಿರುತ್ತಾರೆ ಎಂದರೆ  ಸರಿಯಲ್ಲ. ಸದರಿ ಸಾಲದ ಪಡೆದ ಖಾತ್ರಿಗಾಗಿ ಖಾಲಿ ಚಾಪಾ ಕಾಗದವನ್ನು ಪ್ರತಿವಾದಿಯಿಂದ ನಾನು ಪಡೆದಿರುತ್ತೇನೆ ಎಂದರೆ  ಸರಿಯಲ್ಲ. ಸದಿರಿ ನಿಪಿ-1 ನ್ನು ಶ್ರೀನಿವಾಸ್ ಎಂಬ ಪತ್ರ ಬರಹಗಾರರಿಂದ ಮದ್ಯಾಹ್ನ 12.30 ಸಮಯದಲ್ಲಿ ತಯಾರಿಸಲಾಗಿರುತ್ತದೆ. ನಿಪಿ-1 ರ ನೂರು ರೂ ಮುಖ ಬೆಲೆಯ ಚಾಪಾ ಕಾಗದವನ್ನು ಪತ್ರ ಬರಹಾಗಾರರು

ಮತ್ತು ಪ್ರತಿವಾದಿಯು ಖರೀದಿಸಿರುತ್ತಾರೆ. ನಿಪಿ-1 ರಂತೆ ಕರಾರು ತಯಾರಿಸುವ ಸಂದರ್ಬದಲ್ಲಿ ಸಾಕ್ಷಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಲ್ಲಿ ಒಬ್ಬರಾದ ಕೃಷ್ಣಮೂರ್ತಿ ನನ್ನ ಮಾವ ಎಂದರೆ ಸರಿ.

4. ನಿಪಿ-1 ರಂತೆ ನಾನು ಯಾವುದೇ ಕರಾರನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತು ಹೆಚ್ಚು ಬೆಲೆ ಬಾಳುವುದರಿಂದ ಸದರಿ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ-1 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಚೆಕ್ಕುಬಂದಿಃ ಪೂರ್ವಕ್ಕೆ ಗೊರವಿನ ಕಲ್ಲು ಜಮೀನು, ಪಶ್ಚಿಮಕ್ಕೆ ವೆಂಕಟೇಶಯ್ಯ ನವರ ಜಮೀನು, ಉತ್ತರಕ್ಕೆ ಮೈಲಾರಪ್ಪ ನವರ ಜಮೀನು, ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

5. ದಿಃ09.04.2014 ರಂದು ನಿಪಿ-3 ರಂತೆ ನಾನು ಪ್ರತಿವಾದಿಗೆ ನೋಟೀಸ್ ನೀಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯು ಸದರಿ ನೋಟೀಸ್ ಗೆ ದಿಃ22.04.2014 ರಂದು ನಿಪಿ-6 ರಂತೆ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.